## ಸುಂದರ ನೆನಪುಗಳು

ಭಾರತಿ ಕಾಸರಗೋಡು ಅವರ ದೊರೆಸ್ವಾಮಿ ಅಯ್ಯಂಗಾರ್ ಜನ್ಮ ಶತಮಾನೋತ್ಸವ ಸಂಭ್ರಮದ ಲೇಖನ (ಆ. 19) ಮಾಹಿತಿಪೂರ್ಣವಾಗಿದೆ. ಈ 'ವೈಣಿಕ ಶಿಖಾಮಣಿ' ಶಾಂತಚಿತ್ತರು, ಅತಿ ಸರಳರು, ಮಾತಿನಲ್ಲಿ ರಸಿಕರು. 1985ರಲ್ಲಿ 'ಯವನಿಕ'ದಲ್ಲಿ ಶುಕ್ರವಾರದ ಸಂಜೆ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿದ್ದರು. ಮೊದಲು ಭಾಷಣಕ್ಕೆ ಮುಂದಾದ ಮತ್ತೊಬ್ಬ ಅತಿಥಿ ಇಂಗ್ಲೀಷ್‌ನಲ್ಲಿ ಭಾಷಣ ಪ್ರಾರಂಭಿಸಿದಾಗ, ಕನ್ನಡದಲ್ಲಿ ಮಾತಾಡಬೇಕು ಎಂದು ಗದ್ದಲ ಪ್ರಾರಂಭವಾಯಿತು. ಅವರು ಕನ್ನಡ–ಇಂಗ್ಲಿಷ್ ಮಿಶ್ರ ಮಾಡಿ ಭಾಷಣ ಮುಗಿಸಿದರು. ನಂತರ ಶಾಂತಚಿತ್ತರಾಗಿ ಕುಳಿತಿದ್ದ ದೊರೆಸ್ವಾಮಿಯವರ ಸರದಿ. ಅವರು 'ನನಗೆ ಇಂಗ್ಲಿಷಿನಲ್ಲಿ ಭಾಷಣ ಮಾಡಬೇಕೇ ಅಥವಾ ಕನ್ನಡದಲ್ಲಿಯೇ ಎಂಬ ಗೊಂದಲವೇ ಇಲ್ಲ. ಏಕೆಂದರೆ ನಾನೊಬ್ಬ ಭಾಷಣಕಾರನೇ ಅಲ್ಲ' ಎಂದಾಗ ಸಭೆಯಲ್ಲಿ ನಗು, ಚಪ್ಪಾಳೆ. ಸಂಕ್ಷಿಪ್ತವಾಗಿ ಕನ್ನಡದಲ್ಲಿ ಮಾತನಾಡಿದರು.



—ಜಯಪ್ರಕಾಶ ತಲವಾಟ, ಸಾಗರ

'ವೀಣೆಯ ನೆರಳಿನಲ್ಲಿ ಜನ್ಮಶತಾಬ್ದಿ ರಂಗವಲ್ಲಿ' ಲೇಖನ ತುಂಬಾ ಸೊಗಸಾಗಿದೆ. ಮಹಾನ್ ಸಾಧನೆಗೈದಿರುವ ದೊರೆಸ್ವಾಮಿ ಅಯ್ಯಂಗಾರ್ ಅವರು ಇಂದಿನ ಪೀಳಿಗೆಗೆ ಒಬ್ಬ ಸ್ಫೂರ್ತಿದಾಯಕ ಕಲಾವಿದರು. ಇಂಥವರ ಬಗ್ಗೆ ದೂರದರ್ಶನದಲ್ಲಿ ಧಾರಾವಾಹಿಯನ್ನು ಪ್ರಸಾರ ಮಾಡಿದರೆ, ಯುವ ಪೀಳಿಗೆಗೆ ಸಾಧನೆ ಮಾಡಲು ಉತ್ತೇಜನ ನೀಡಿದಂತಾಗುತ್ತದೆ.

—ಮಧುಮತಿ ಅಭಿಷೇಕ್, ಚಿತ್ರದುರ್ಗ

## ಕೋವಿಡ್ ಶೋಕ

ಡಾ. ಕೆ.ಎಸ್. ಪವಿತ್ರ ಅವರ 'ಕೋವಿಡ್ ಶೋಕ: ಸಾಂತ್ವನ ಹೇಗೆ?' (ಆ. 19) ಲೇಖನ ಮಾರ್ಮಿಕವಾಗಿದೆ. ಎರಡನೇ ಅಲೆಯಲ್ಲಿ ಕೋವಿಡ್‌ನಿಂದ ಸಾಕಷ್ಟು ತೊಂದರೆ ಅನುಭವಿಸಿದವರಲ್ಲಿ ನಾನೂ ಒಬ್ಬ. ನಮ್ಮ ಇಡೀ ಕುಟುಂಬವೇ ಕೋವಿಡ್‌ಗೆ ಈಡಾದಾಗ ನಾವು ಅನುಭವಿಸಿದ ನರಕ ಯಾತನೆ, ನೋವು ವರ್ಣಿಸಲಸದಳ. ದೇವರ ದಯೆಯಿಂದ ಎಲ್ಲರೂ ಚೇತರಿಸಿಕೊಂಡಿದ್ದೇವೆ.

—ಎಚ್.ಆರ್. ವಸ್ತ್ರದ, ಧಾರವಾಡ

ಲೇಖನ ಓದಿದಾಗ ಕೊರೊನಾ ಎರಡನೇ ಅಲೆಯಲ್ಲಿ ನನ್ನ ಗೆಳತಿ ತನ್ನ ಹತ್ತಿರದ ಬಂಧುವನ್ನು ಕಳೆದುಕೊಂಡದ್ದು ನೆನಪಾಯ್ತು. ಮದುವೆ ಮಾಡಿಕೊಳ್ಳಲು ವಿದೇಶದಿಂದ ಬಂದು, ಮದುವೆಯಾದ ಒಂದೂವರೆ ತಿಂಗಳಿಗೇ ಕೊರೊನಾಗೆ ಬಲಿಯಾದರು ಆ ನವವಿವಾಹಿತ. ಅಂತಹ ಪರಿಸ್ಥಿತಿಯಲ್ಲಿ ಒಬ್ಬನೇ ಮಗನನ್ನು ಕಳೆದುಕೊಂಡ ಪೋಷಕರನ್ನು ಹಾಗೂ ಮದುವೆಯಾದ ಕೆಲವೇ ದಿನಗಳಲ್ಲಿ ವೈಧವ್ಯದಿಂದ ದುಃಖಿತೆಯಾದ ಹುಡುಗಿಯನ್ನು ಹೇಗೆ ಸಾಂತ್ವನ ಮಾಡಬೇಕೆಂದು ತೋಚಲಿಲ್ಲ.

—ಕೆ.ಎಸ್. ಸವಿತ, ಬೆಂಗಳೂರು

### ಬಾಲ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಶಹಾಪುರದ ಸಂಧ್ಯಾ ಸಾಹಿತ್ಯ ವೇದಿಕೆಯು 16 ವರ್ಷದೊಳಗಿನ ಬಾಲ ಬರಹಗಾರರಿಗೆ 'ವಿದ್ಯಾಸಾಗರ ಬಾಲ ಪುರಸ್ಕಾರ'ಕ್ಕೆ ಅರ್ಜಿ ಆಹ್ವಾನಿಸಿದೆ. ಪುರಸ್ಕಾರವು 5000 ನಗದು ಮತ್ತು ಪ್ರಶಸ್ತಿ ಫಲಕವನ್ನು ಒಳಗೊಂಡಿದೆ. ಪ್ರಕಟಿತ ಅಥವಾ ಅಪ್ರಕಟಿತ ಕನ್ನಡ ಬರಹಗಳನ್ನು ಕಳುಹಿಸಬಹುದು.

ಜನ್ಮದಿನಾಂಕ ದೃಢೀಕರಣ ಮತ್ತು ಫೋಟೊ ಕಡ್ಡಾಯ. ಬರಹಗಳನ್ನು ಕಳಿಸಲು ಕೊನೆಯ ದಿನಾಂಕ: ಅಕ್ಟೋಬರ್ 10. ವಿಳಾಸ: ರವಿ ಹಿರೇಮಠ, ಅಧ್ಯಕ್ಷರು, ಸಂಧ್ಯಾ ಸಾಹಿತ್ಯ ವೇದಿಕೆ, ಅಮೃತ ನಿವಾಸ, ಸಿ.ಬಿ.ಕಮಾನಿನ ಹತ್ತಿರ, ಶಹಾಪುರ 585 223 (ಯಾದಗಿರಿ ಜಿಲ್ಲೆ). ಮಾಹಿತಿಗಾಗಿ: 9448651520/ 9986590894



## ದ್ರೌಪದಿಯ ಅಂತರಂಗಕ್ಕೆ ಕನ್ನಡಿ

ಟಿ.ಎಂ. ಉಷಾರಾಣಿ ಅವರ 'ದ್ರೌಪದಿಯ ಅಂತರಂಗದಿಂದ' (ಆ. 19) ಕಥೆ ಕುತೂಹಲಕರವಾಗಿದೆ. ಐವರ ಅಂತರಂಗದ ಅಲೆಗಳಿಗೆ ಇರುವುದು ಅವಳ ಬಳಿ ಒಂದೇ ಹೆರಳು. ಅದನ್ನು ದುಶ್ಶಾಸನ ಕೈಹಾಕಿ ಎಳೆದಿದ್ದು ಎಷ್ಟರಮಟ್ಟಿಗೆ ಸರಿ? ನಾನು ಕಂಡುಕೊಂಡ ಸತ್ಯ ಏನೆಂದರೆ, ಹೆಂಗಸಿನ ನಿಜವಾದ ಸೌಂದರ್ಯ ಕಾಣಸಿಗುವುದು ಅವಳ ಹೆರಳಲ್ಲಿ, ಕೂದಲಿನ ಅಲಂಕಾರದಲ್ಲಿ. ಅದರ ಸಂರಕ್ಷಣೆ ಮತ್ತು ಸೌಂದರ್ಯ ವಿವರಣೆ ಚೆನ್ನಾಗಿ ಮೂಡಿ ಬಂದಿದೆ. ಇನ್ನು ಜಾಸ್ತಿ ವರ್ಣನೆ ಬೇಕಿತ್ತು.

—ಜಿ.ಎಸ್. ಕುಮಾರಸ್ವಾಮಿ

ಹೌದಲ್ವಾ? ನಾವು ವ್ಯಕ್ತಿಯ ಒಂದೇ ಮಗ್ಗಲನ್ನು ನೋಡಿರುತ್ತೇವೆ. ಕಥೆಗಾರ್ತಿ ದ್ರುಪದನ ಮಗಳ ವೈಯಕ್ತಿಕ ದುಃಖ, ದುಮ್ಮಾನ ಸುಖದ ಸಮ್ಮಾನವನ್ನು ಪರಿಚಾರಿಕೆಯ ಮೂಲಕ ಅನಾವರಣಗೊಳಿಸಿದ್ದಾರೆ.

—ಬಾಪು ದಿವ್ಯಪ್ರಸಾದ

## ನಿಮ್ಮೊಡನೆ

ಆ. 19ರ ಸಂಚಿಕೆಯ ನಿಮ್ಮೊಡನೆ ಪುಟದಲ್ಲಿನ ರಘುನಾಥ ಚ.ಹ. ಅವರ 'ದೇವರನ್ನು ರಕ್ಷಿಸುವುದು ನಮ್ಮೆಲ್ಲರ ಕೆಲಸ' ಬರಹ ಪುಟ್ಟದಾದರೂ ದೊಡ್ಡ ಅರಿವಿನ ಸಂದೇಶ ನೀಡುತ್ತದೆ.

—ಜಗದೀಶ ಬಿ. ಹೊಸೂರು, ಮೈಸೂರು

## ಘಟಸ್ಫೋಟ

ಪ್ರಸ್ತುತ ಸಮಾಜದಲ್ಲಿ ವರ್ಣಸಂಕರ ವ್ಯವಸ್ಥೆ ಜೀವಂತವಾಗಿದೆ ಎಂಬುದನ್ನು ಬಹಳ ಮನೋಜ್ಞವಾಗಿ ಲೋಕೇಶ ಅಗಸನಕಟ್ಟೆ ಅವರು 'ಘಟಸ್ಫೋಟ' ಕಥೆಯಲ್ಲಿ (ಆ. 12) ಚಿತ್ರಿಸಿದ್ದಾರೆ.

—ಪ.ಚಂದ್ರಕುಮಾರ, ಗೌನಹಳ್ಳಿ

## ಭಾರತದ ಕ್ರೀಡಾಶಕ್ತಿ



ವಿಶಾಖ ಎನ್. ಅವರ 'ಈಶಾನ್ಯ ಭಾರತ; ಕ್ರೀಡಾ ಶಕ್ತಿಯ ದ್ಯೋತಕ' (ಆ.19) ಲೇಖನ ಚೆನ್ನಾಗಿತ್ತು. ಮೊನ್ನೆ ಮೊನ್ನೆಯವರೆಗೂ ಎಲೆಮರೆಯ ಕಾಯಿಯಂತೆ ಇದ್ದ ಇವರು ಇಂದು ಇಡೀ ಭಾರತೀಯರ ಮನ ಗೆದ್ದಿದ್ದಾರೆ. ಹೀಗಿದ್ದೂ ಇವರನ್ನು 'ಈಶಾನ್ಯ ಭಾರತದ ಸ್ಪರ್ಧಿಗಳು' ಎಂದು ಹಣೆಪಟ್ಟಿ ಕೊಟ್ಟಿದ್ದು ಯಾರೋ ದೇಶದ್ರೋಹಿಗಳಿರಬೇಕು. 75ರ ಸ್ವಾತಂತ್ರ್ಯ ಸಂಭ್ರಮ ಆಚರಿಸುವ ಭಾರತಮಾತೆಗೆ ಪದಕದ ಹಾರ ಅರ್ಪಿಸಿದ ಒಲಿಂಪಿಕ್ ವೀರಮಣಿಗಳಿಗೆ ನಮನ.

—ವಿದ್ಯಾ ಶೆಣೈ, ಕುಂದಾಪುರ

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in